**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 569/2024**

**ಚಾ.ಸಾಃ 5, ಫ್ರಾ.ಸಾಃ 4**

| | |
|---|---|
| ಸಾಕ್ಷಿದಾರನ ಹೆಸರು | ಪದ್ಮಾವತಿ ಗೌಡ |
| ತಂದೆಯ ಹೆಸರು | ನಾರಾಯಣ ಗೌಡ |
| ವಯಸ್ಸು | 39 ವರ್ಷಗಳು |
| ಉದ್ಯೋಗ | ಮಹಿಳಾ ಮುಖ್ಯ ಪೇದೆ, ಭಟ್ಕಳ ನಗರ ಠಾಣೆ |
| ವಾಸ್ತವ್ಯ | ಇಡಗುಂಜಿ |

**ಸಾಕ್ಷಿಯನ್ನು ದಿನಾಂಕಃ 21-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಅಕ್ಟೋಬರ್ 2021 ರಿಂದ ಮೇ 2025 ರ ವರೆಗೆ ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಮಹಿಳಾ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 12-08-2024 ರಂದು ಮಧ್ಯಹ್ನ 12-30 ರ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ನನ್ನನ್ನು ಮತ್ತು ಚಾ.ಸಾ. 2 ರಿಂದ 4, 6 ಮತ್ತು 7 ರವರನ್ನು ಕರೆದು ಚಂದಾವರ ನಾಕಾದಿಂದ ಮಾರುತಿ ದೇವಸ್ಥಾನದ ಕಡೆಗೆ ಹೋಗುವ ರಸ್ತೆಯಲ್ಲಿ ಒಬ್ಬ ವ್ಯಕ್ತಿಯು ತನ್ನ ವಾಸದ ಮನೆಯಲ್ಲಿ ಅಕ್ರಮ ಮಧ್ಯವನ್ನು ಮಾರಾಟ ಮಾಡಲು ಅಕ್ರಮವಾಗಿ ತನ್ನ ಮನೆಯಲ್ಲಿ ಇಟ್ಟುಕೊಂಡಿರುವುದಾಗಿ ಮಾಹಿತಿ ಬಂದಿದ್ದು, ಅದರಂತೆ ತಾನು ಈ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿ, ಘಟನಾ ಸ್ಥಳವು ವಾಸದ ಮನೆಯಾಗಿದ್ದರಿಂದ ಚಾಸಾ-10 ರವರ ಮೂಲಕ ಭಟ್ಕಳ ಉಪ ವಿಭಾಗದ ಡಿವೈಎಸ್‌ಪಿ ರವರಿಗೆ ಸರ್ಚ ವಾರಂಟ್‌ಗಾಗಿ ಮನವಿ ಸಲ್ಲಿಸಿ, ಸರ್ಚ ವಾರಂಟ್ ಪಡೆದುಕೊಂಡಿದ್ದು, ದಾಳಿಗೆ ಹೋಗಬೇಕು ಎಂದು ನಮಗೆ ತಿಳಿಸಿರುತ್ತಾರೆ. ಅದರಂತೆ ಮಧ್ಯಾಹ್ನ 12-35 ರ ವೇಳೆಗೆ ಚಾ.ಸಾ. 1 ರವರು ನಮ್ಮನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗಿದ್ದು, ಮಧ್ಯಾಹ್ನ 01-00 ಗಂಟೆಯ ಸಮಯಕ್ಕೆ ಚಂದಾವರ ಸೇತುವೆಯ ಹತ್ತಿರ ಹೋಗಿ ಚಾಸಾ-4 ರವರ ಮೂಲಕ ಚಾಸಾ-2 ಮತ್ತು 3 ರವರನ್ನು ಪಂಚರಾನ್ನಾಗಿ ಬರಮಾಡಿಕೊಂಡಿದ್ದು, ಅವರಿಗೆ ಮಾಹಿತಿ ತಿಳಿಸಿದ್ದು, ಅವರು ಒಪ್ಪಿಕೊಂಡಿದ್ದು, ಅವರೊಡನೆ ಅಲ್ಲಿಂದ ಹೊರಟು 01-20 ರ ವೇಳೆಗೆ ಮಾಹಿತಿ ಬಂದ ಆರೋಪಿ ಮನೆ ಹತ್ತಿರ ಹೋಗಲಾಗಿ ಚಾಸಾ-4 ರವರು ಸುಮಾರು 50 ಅಡಿ ದೂರದಿಂದ ಆರೋಪಿ ಮನೆಯನ್ನು ತೋರಿಸಿರುತ್ತಾರೆ. ಅದರಂತೆ ಮಧ್ಯಾಹ್ನ 01-30 ರ ಸಮಯದಲ್ಲಿ ಆರೋಪಿಯ ಮನೆಯ ಮೇಲೆ ಪಂಚರ ಸಮಕ್ಷಮ ದಾಳಿ ಮಾಡಿ ಆತನ ಮನೆಯಲ್ಲಿ ಒಬ್ಬ ವ್ಯಕ್ತಿ ಇದ್ದು, ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಅರುಣ ತಂದೆ ಕೇಶವ ಎಂದು ತಿಳಿಸಿರುತ್ತಾನೆ. ಆತನಿಗೆ ದಾಳಿಯ ಮಾಹಿತಿ ತಿಳಿಸಿ ಆತನ ಮನೆಯನ್ನು ಪರಿಶೀಲಿಸಿದಾಗ ಅಡುಗೆ ಮನೆಯ ದಕ್ಷಿಣದಲ್ಲಿ ಎರಡು ಕೆಂಪು ಬಣ್ಣದ ಪ್ಲಾಸ್ಟಿಕ್

ಚೀಲದಲ್ಲಿ ಮತ್ತು ಒಂದು ರಟ್ಟಿನ ಬಾಕ್ಸನಲ್ಲಿ ಮಧ್ಯ ಇರುವುದು ಕಂಡು ಬಂದಿರುತ್ತದೆ. ಆರೋಪಿಯ ಬಳಿ ಚಾ.ಸಾ. 1 ರವರು ಅವುಗಳ ಬಗ್ಗೆ ಲೈಸನ್ಸ ಕೇಳಿದಾಗ ಇಲ್ಲವೆಂದು ಹೇಳಿರುತ್ತಾನೆ. ಪಂಚರ ಸಮಕ್ಷಮ ಅವುಗಳನ್ನು ತೆರೆದು ನೋಡಿದಾಗ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 500 ಎಮ್ ಎಲ್ ನ 17 ಯುಬಿ ಎಕ್ಸಪೊರ್ಟ ಬಿಯರ್ ಟಿನಗಳು, 180 ಎಮ್ ಎಲ್ ನ 9 ಬೆಂಗಳೂರು ವಿಸ್ಕಿ ಪೌಚ್ ಗಳು, 90 ಎಮ್ ಎಲ್ ನ 138 ಓಸಿ ಡಿಲಕ್ಸ ವಿಸ್ಕಿ ಪೌಚ್ ಗಳು, 90 ಎಮ್ ಎಲ್ ನ 84 ಹೈವರ್ಡ್ಸ ಚಿಯರ್ಸ ವಿಸ್ಕಿ ಪೌಚ್ ಗಳು, 180 ಎಮ್ ಎಲ್ ನ 20 ಓಟಿ ವಿಸ್ಕಿ ಪೌಚ್ ಗಳು ಇದ್ದವು. ನಂತರ ಸದರಿ ಮಧ್ಯಗಳನ್ನು ಪ್ಲಾಸ್ಟಿಕ್ ಚೀಲಗಳನ್ನು ಮತ್ತು ರಟ್ಟಿನ ಬಾಕ್ಸಗಳನ್ನು ಅಮಾನತ್ತು ಪಡಿಸಿಕೊಂಡು ಎಲ್ಲಾ ಮಧ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಬಿಳಿಯ ಚೀಲದಲ್ಲಿ ಹಾಕಿ ಸೀಲ್ ಮಾಡಿ ಪಂಚರ ಸಹಿ ತೆಗೆದುಕೊಂಡಿರುತ್ತಾರೆ. ಈಗ ಬಗ್ಗೆ ವಿವರವಾದ ಪಂಚನಾಮೆಯನ್ನು ಮಧ್ಯಾಹ್ನ 01-00 ರಿಂದ 02-15 ರ ಸಮಯದಲ್ಲಿ ತಯಾರಿಸಿ ಈ ಬಗ್ಗೆ ಫೋಟೋ ತೆಗೆದು ಸಂಪೂರ್ಣ ದಾಳಿಯ ವಿವರವನ್ನು Sony Handy Camera ದಲ್ಲಿ ಚಿತ್ರೀಕರಣ ಮಾಡಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರು, ಗುರುತಿನ ಬಗ್ಗೆ ತಕಾರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ಆ ದಿನ ಮಾದರಿ ತೆಗೆದ ಪೌಚುಗಳು ಮತ್ತು ಟಿನಗಳನ್ನು ನೋಡಿದರೆ ಗುರುತಿಸುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಮುಮಾ-1 ರಿಂದ 7 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಜಿ.ಚಂದಾವರರಿಂದಃ**

ವಾಹನವನ್ನು ಮಾರುತಿ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ನಿಲ್ಲಿಸಿದ್ದೇವು. ಆ ಕಾಲಕ್ಕೆ ಪಂಚರು ಸಹ ಇದ್ದರು. ಆರೋಪಿಯ ಮನೆಗೆ ಹೋದಾಗ ಅಲ್ಲಿದ್ದ ಮುದ್ದೆಗಳನ್ನು ಇದ್ದ ಸ್ಥಿತಿಯಲ್ಲಿ ಫೊಟೋ ತೆಗೆದಿದ್ದಾರೆಯೇ ಎಂದರೆ ವಿಡಿಯೋ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಮಧ್ಯದ ಪ್ರತಿ ಪ್ಯಾಕೇಟ್ ಮೇಲೆ ಪಂಚರ ಸಹಿ ತೆಗೆದುಕೊಂಡಿಲ್ಲ. ತೆಗೆದಿದ್ದ ಮಾದರಿಗಳ ಮೇಲೆ ಸಹಿ ತೆಗೆದುಕೊಳ್ಳಲಾಗಿದೆ. ನಾನು ಹೇಳಿರುವಂತೆ ಯಾವುದೇ ಮಾಹಿತಿ ಬರೆದಿರಲಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿಯ ಮನೆಯ ಹತ್ತಿರ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮನೆಯಿಂದ ಯಾವುದೇ ಮಧ್ಯವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಅಮಾನತ್ತುಪಡಿಸಿಕೊಂಡ ಮಧ್ಯದ ವಿವರಗಳನ್ನು ಬರೆಯಲಾಗಿದೆ. ಆದರೆ ಮಧ್ಯದ ಬ್ಯಾಚ್ ನಂ. ಬರೆಯಲಿಲ್ಲ. ಮನೆಗೆ ವಿಧ್ಯುತ್ ಸಂಪರ್ಕ ಇತ್ತು. ವಿಧ್ಯುತ್ ಮೀಟರ್ ನಂ. ಅನ್ನು ಪಂಚನಾಮೆಯಲ್ಲಿ ಬರೆದಿಲ್ಲ. ವಿಧ್ಯುತ್ ಮೀಟರ್ ಬರುವಂತೆ ಫೊಟೋ ತೆಗೆದಿಲ್ಲ. ಸದರಿ ಮನೆಯ ಪಂಚಾಯಿತಿ ನಂ. ನ್ನು ಬರೆದಿತ್ತೊ ಇಲ್ಲವೋ ಎಂದು ನೋಡಲಿಲ್ಲ. ಅಂಕಿ ಅಂಶಗಳಿಗೋಸ್ಕರ ಸುಳ್ಳು ದೂರು ನೀಡಿಲಾಗಿದೆ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆಮಾಲಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅನಾಮದೇಯವಾಗಿ ಸಿಕ್ಕಿದ್ದ ಮಧ್ಯದ ಆಧಾರವಾಗಿ ಆರೋಪಿ ವಿರುದ್ಧ ಪ್ರಕಣದ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ಕೇಸಿಗೆ ಅನೂಕೂಲವಾಗುವಂತೆ ದಾಖಲೆಗಳನ್ನು ಸೃಷ್ಟಿಸಲಾಗಿದೆ

ಎಂದರೆ ಸರಿಯಲ್ಲ. ಪ್ರತಿಯೊಂದು ಟೆಟ್ರಾ ಪ್ಯಾಕ್ ಗಳ ಮೇಲೆ ಮತ್ತು ಟಿನ್ ಗಳ ಮೇಲೆ ಪಂಚರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**